# भारत का राजपत्र
# The Gazette of India

# ಭಾರತ ರಾಜಪತ್ರ

**(Extraordinary)**
**(ವಿಶೇಷ ಸಂಚಿಕೆ)**

**भाग IX अनुभाग 1**
**PART IX SECTION 1**
**ಭಾಗ IX ವಿಭಾಗ 1**

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, बुधवार, 26 मार्च, 2025 | फाल्गुन 27, 1946 (शक) | खंड.56 |
| No.1, New Delhi, Wednesday, March 26, 2025 | Phalguna 27, 1946 (saka) | Vol. 56 |
| ನಂ.1, ನವದೆಹಲಿ, ಬುಧವಾರ, ಮಾರ್ಚ್ 26, 2025 | ಫಾಲ್ಗುಣ 27, 1946 (ಶಕ) | ಸಂಪುಟ.56 |


**Ministry of Law and Justice**
(Legislative Department)
New Delhi, 26th March, 2025

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 26ನೇ ಮಾರ್ಚ್, 2025**

The Translation in Kannada of the following Acts, namely:- (1) THE BIOLOGICAL DIVERSITY ACT, 2002 (NO.18 OF 2003), (2) THE FISCAL RESPONSIBILITY AND BUDGET MANAGEMENT ACT, 2003 (NO.39 OF 2003), (3) THE TRANSGENDER PERSONS (PROTECTION OF RIGHTS) ACT, 2019 (NO.40 OF 2019), (4) THE WHISTLE BLOWERS PROTECTION ACT, 2014 (NO.17 OF 2014) - is hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಜೈವಿಕ ವೈವಿಧ್ಯತೆ ಅಧಿನಿಯಮ, 2002 (2003ರ ಸಂಖ್ಯೆ 18), (2) ವಿತ್ತೀಯ ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣೆ ಅಧಿನಿಯಮ, 2003 (2003ರ ಸಂಖ್ಯೆ 39), (3) ತೃತೀಯಲಿಂಗಿ ವ್ಯಕ್ತಿಗಳ (ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019ರ ಸಂಖ್ಯೆ 40), (4) ಮಾಹಿತಿದಾರರ ಸಂರಕ್ಷಣಾ ಅಧಿನಿಯಮ, 2014 (2014ರ ಸಂಖ್ಯೆ 17)– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ತೃತೀಯಲಿಂಗಿ ವ್ಯಕ್ತಿಗಳ (ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019

## (2019ರ ಸಂಖ್ಯೆ 40)

*[5ನೇ ಡಿಸೆಂಬರ್, 2019.]*

ತೃತೀಯಲಿಂಗಿ ವ್ಯಕ್ತಿಗಳ ಹಕ್ಕುಗಳ ಸಂರಕ್ಷಣೆಗಾಗಿ ಮತ್ತು ಅವರ ಕ್ಷೇಮಾಭಿವೃದ್ಧಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಎಪ್ಪತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು, ತೃತೀಯಲಿಂಗಿ ವ್ಯಕ್ತಿಗಳ (ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಮುಚಿತ ಸರ್ಕಾರ" ಎಂದರೆ:–

(i) ಕೇಂದ್ರ ಸರ್ಕಾರ ಅಥವಾ ಆ ಸರ್ಕಾರವು ಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ಒದಗಿಸಿದ ಯಾವುದೇ ಕಾರ್ಯಸಂಸ್ಥೆಯ ಸಂಬಂಧದಲ್ಲಿ ಕೇಂದ್ರ ಸರ್ಕಾರ;

(ii) ರಾಜ್ಯ ಸರ್ಕಾರ ಅಥವಾ ಆ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ಒದಗಿಸಿದ ಯಾವುದೇ ಕಾರ್ಯಸಂಸ್ಥೆಯ ಸಂಬಂಧದಲ್ಲಿ ರಾಜ್ಯ ಸರ್ಕಾರ;

(ಬಿ) "ಕಾರ್ಯಸಂಸ್ಥೆ" ಎಂದರೆ:–

(i) ಕೇಂದ್ರ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಯಾವುದೇ ನಿಕಾಯ ಅಥವಾ ಪ್ರಾಧಿಕಾರ ಅಥವಾ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಸಹಾಯಾನುದಾನ ಪಡೆದ ಯಾವುದೇ ಕಾರ್ಯಸಂಸ್ಥೆ ಅಥವಾ ಕಂಪನಿಗಳ ಅಧಿನಿಯಮ, 2013 (2013ರ 18)ರ 2ನೇ ಪ್ರಕರಣದಲ್ಲಿ ಪರಿಭಾಷಿಸಲಾದಂಥ ಸರ್ಕಾರಿ ಕಂಪನಿ ಮತ್ತು ಸರ್ಕಾರದ ಇಲಾಖೆಯೂ ಒಳಗೊಳ್ಳುತ್ತದೆ; ಅಥವಾ

---

* 10ನೇ ಜನವರಿ, 2020ರ ಅಧಿಸೂಚನೆ ಸಂಖ್ಯೆ ಎಸ್.ಒ.135(ಇ), ದಿನಾಂಕ 10ನೇ, ಜನವರಿ 2020ರ ಭಾರತ ರಾಜಪತ್ರ ವಿಶೇಷ ಸಂಚಿಕೆ ಭಾಗ–II, ಪ್ರಕರಣ 2(ii) ಅನ್ನು ನೋಡಿ.

(ii) ಯಾವುದೇ ಕಂಪನಿ ಅಥವಾ ನಿಗಮಿತ ನಿಕಾಯ ಅಥವಾ ಸಂಸ್ಥೆ ಅಥವಾ ವ್ಯಕ್ತಿಗಳ ನಿಕಾಯ, ಫರ್ಮ್, ಸಹಕಾರಿ ಅಥವಾ ಇತರ ಸೊಸೈಟಿ, ಸಂಘ, ಟ್ರಸ್ಟ್, ಏಜೆನ್ಸಿ, ಸಂಸ್ಥೆ;

(ಸಿ) "ಕುಟುಂಬ" ಎಂದರೆ, ರಕ್ತಸಂಬಂಧದ ಮೂಲಕ ಅಥವಾ ವಿವಾಹದ ಮೂಲಕ ಅಥವಾ ಕಾನೂನಿನ ಅನುಸಾರವಾಗಿ ದತ್ತಕ ಪಡೆದುಕೊಳ್ಳುವ ಮೂಲಕ ಸಂಬಂಧ ಹೊಂದಿರುವ ಜನರ ಗುಂಪು;

(ಡಿ) "ಸಮ್ಮಿಳಿತ ಶಿಕ್ಷಣ (inclusive education)" ಎಂದರೆ, ತೃತೀಯಲಿಂಗಿ ವಿದ್ಯಾರ್ಥಿಗಳು ತಾರತಮ್ಯ, ನಿರ್ಲಕ್ಷ್ಯ, ಶೋಷಣೆ ಅಥವಾ ಬೆದರಿಕೆಯ ಭಯವಿಲ್ಲದೆ ಇತರ ವಿದ್ಯಾರ್ಥಿಗಳೊಂದಿಗೆ ಕಲಿಯುವ ಶಿಕ್ಷಣದ ಪದ್ಧತಿ ಮತ್ತು ಅಂಥ ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಗಳನ್ನು ಸೂಕ್ತವಾಗಿ ಪೂರೈಸಲು ಅಳವಡಿಸಿಕೊಂಡ ಬೋಧನಾ ಮತ್ತು ಕಲಿಕಾ ಪದ್ಧತಿ;

(ಇ) "ಸಂಸ್ಥೆ" ಎಂದರೆ, ತೃತೀಯಲಿಂಗಿ ವ್ಯಕ್ತಿಗಳ ವಸತಿ, ಪಾಲನೆ, ಸಂರಕ್ಷಣೆ, ಶಿಕ್ಷಣ, ತರಬೇತಿ ಅಥವಾ ಇತರ ಯಾವುದೇ ಸೇವೆಗಾಗಿ ಇರುವ ಸರ್ಕಾರಿ ಅಥವಾ ಖಾಸಗಿ ಸಂಸ್ಥೆ;

(ಎಫ್) "ಸ್ಥಳೀಯ ಪ್ರಾಧಿಕಾರ" ಎಂದರೆ, ತನ್ನ ಅಧಿಕಾರವ್ಯಾಪ್ತಿಯಲ್ಲಿ ಬರುವ ಪ್ರದೇಶಗಳ ಸಂಬಂಧದಲ್ಲಿ ನಗರಪಾಲಿಕಾ ಸೇವೆಗಳು ಅಥವಾ ಸಂದರ್ಭಾನುಸಾರ, ಮೂಲಭೂತ ಸೇವೆಗಳನ್ನು ಒದಗಿಸುವುದಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿತವಾದ ನಗರಪಾಲಿಕೆ ಅಥವಾ ಪೌರಸಭೆ ಅಥವಾ ಪಂಚಾಯಿತಿ ಅಥವಾ ಇತರ ಯಾವುದೇ ಸ್ಥಳೀಯ ನಿಕಾಯ;

(ಜಿ) "ರಾಷ್ಟ್ರೀಯ ಪರಿಷತ್ತು" ಎಂದರೆ, 16ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ತೃತೀಯಲಿಂಗಿ ವ್ಯಕ್ತಿಗಳ ಪರಿಷತ್ತು;

(ಎಚ್) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ಐ) "ಅಂತರ್ಲಿಂಗ ವ್ಯತ್ಯಾಸಗಳನ್ನುಳ್ಳ ವ್ಯಕ್ತಿ" ಎಂದರೆ, ಜನನದ ಸಮಯದಲ್ಲಿ ಅವನ ಅಥವಾ ಅವಳ ಪ್ರಾಥಮಿಕ ಲೈಂಗಿಕ ಗುಣಲಕ್ಷಣ, ಬಾಹ್ಯ ಜನನಾಂಗ, ಗಂಡು ಅಥವಾ ಹೆಣ್ಣಿನ ದೇಹದ ಪ್ರಮಾಣಕ ಮಾನಕದಿಂದ ಬರುವ ವರ್ಣತಂತುಗಳಲ್ಲಿ ಅಥವಾ ಹಾರ್ಮೋನ್‌ಗಳಲ್ಲಿ ವ್ಯತ್ಯಾಸಗಳು ಗೋಚರಿಸುವ ವ್ಯಕ್ತಿ;

(ಜೆ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ಸಮುಚಿತ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು; ಮತ್ತು

(ಕೆ) "ತೃತೀಯಲಿಂಗಿ (ಲಿಂಗತ್ವ ಅಲ್ಪಸಂಖ್ಯಾತ) ವ್ಯಕ್ತಿ" ಎಂದರೆ, ಯಾವ ವ್ಯಕ್ತಿಯ ಲಿಂಗವು ಆತನ ಜನನ ಸಮಯದಲ್ಲಿ ಆ ವ್ಯಕ್ತಿಗಿರುವ ಲಿಂಗಕ್ಕೆ ಹೊಂದಾಣಿಕೆಯಾಗುವುದಿಲ್ಲವೋ ಆ ವ್ಯಕ್ತಿ ಮತ್ತು ಇದರಲ್ಲಿ ತೃತೀಯಲಿಂಗಿ ಪುರುಷನನ್ನು ಅಥವಾ ತೃತೀಯಲಿಂಗಿ ಮಹಿಳೆಯನ್ನು (ಅಂಥ ವ್ಯಕ್ತಿಯು, ಲಿಂಗ ಪುನರ್-ನಿರ್ಧರಣಾ ಚಿಕಿತ್ಸೆಗೆ ಅಥವಾ ಹಾರ್ಮೋನ್ ಥೆರಪಿಗೆ ಅಥವಾ ಲೇಸರ್ ಥೆರಪಿಗೆ ಅಥವಾ ಅಂಥ ಇತರ ಥೆರಪಿಗೆ ಒಳಗಾಗಿರಲಿ ಅಥವಾ ಇಲ್ಲದಿರಲಿ), ಅಂತರ್ಲಿಂಗ ವ್ಯತ್ಯಾಸಗಳುಳ್ಳ ವ್ಯಕ್ತಿ, ಸಲಿಂಗಕಾಮಿ ಮತ್ತು ಕಿನ್ನರ್, ಹಿಜ್ರಾ, ಅರವಾಣಿ ಮತ್ತು ಜೋಗ್ತಾ ಎಂದು ಗುರುತಿಸಿಕೊಂಡಿರುವ ಸಮಾಜೋ-ಸಾಂಸ್ಕೃತಿಕ ಗುರುತುಗಳನ್ನು ಹೊಂದಿರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

## ಅಧ್ಯಾಯ II

## ತಾರತಮ್ಯದ ವಿರುದ್ಧ ನಿಷೇಧ

**3. ತಾರತಮ್ಯದ ವಿರುದ್ಧ ನಿಷೇಧ.–** ಯಾರೇ ವ್ಯಕ್ತಿ ಅಥವಾ ಕಾರ್ಯಸಂಸ್ಥೆಯು, ಈ ಕೆಳಕಂಡ ಯಾವುದೇ ಕಾರಣದ ಮೇಲೆ ತೃತೀಯಲಿಂಗಿ ವ್ಯಕ್ತಿಯ ವಿರುದ್ಧ ತಾರತಮ್ಯ ಮಾಡತಕ್ಕದ್ದಲ್ಲ, ಎಂದರೆ:–

(ಎ) ಶಿಕ್ಷಣ ಸಂಸ್ಥೆಗಳು ಮತ್ತು ಅದರ ಸೇವೆಗಳನ್ನು ನಿರಾಕರಿಸುವುದು ಅಥವಾ ಮುಂದುವರಿಸದೆ ಇರುವುದು ಅಥವಾ ಅವುಗಳಲ್ಲಿ ಅನುಚಿತವಾಗಿ ನಡೆಸಿಕೊಳ್ಳುವುದು;

(ಬಿ) ಉದ್ಯೋಗ ಅಥವಾ ವೃತ್ತಿಯಲ್ಲಿ ಅಥವಾ ಅದರ ಸಂಬಂಧದಲ್ಲಿ ಅನುಚಿತವಾಗಿ ನಡೆಸಿಕೊಳ್ಳುವುದು;

(ಸಿ) ಉದ್ಯೋಗ ಅಥವಾ ವೃತ್ತಿಯನ್ನು ನಿರಾಕರಿಸುವುದು ಅಥವಾ ಅದನ್ನು ಕೊನೆಗೊಳಿಸುವುದು;

(ಡಿ) ಆರೋಗ್ಯಪಾಲನಾ ಸೇವೆಗಳನ್ನು ನಿರಾಕರಿಸುವುದು ಅಥವಾ ಮುಂದುವರಿಸದೆ ಇರುವುದು ಅಥವಾ ಅವುಗಳಲ್ಲಿ ಅನುಚಿತವಾಗಿ ನಡೆಸಿಕೊಳ್ಳುವುದು;

(ಇ) ಸಾರ್ವಜನಿಕರ ಬಳಕೆಗೆ ಸಮರ್ಪಿತವಾದ ಅಥವಾ ರೂಢಿಗತವಾಗಿ ಸಾರ್ವಜನಿಕರಿಗೆ ಲಭ್ಯವಾಗುವ ಯಾವುವೇ ಸರಕುಗಳು, ವಸತಿ, ಸೇವೆ, ಸೌಲಭ್ಯ, ಪ್ರಯೋಜನ, ವಿಶೇಷ ಹಕ್ಕು ಅಥವಾ ಅವಕಾಶವನ್ನು ಪಡೆಯುವುದಕ್ಕೆ ಅಥವಾ ಕಲ್ಪಿಸುವುದಕ್ಕೆ ಅಥವಾ ಅನುಭೋಗಿಸುವುದಕ್ಕೆ ಅಥವಾ ಬಳಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಅವುಗಳನ್ನು ನಿರಾಕರಿಸುವುದು ಅಥವಾ ಮುಂದುವರಿಸದೆ ಇರುವುದು ಅಥವಾ ಅನುಚಿತವಾಗಿ ನಡೆಸಿಕೊಳ್ಳುವುದು;

(ಎಫ್) ಚಲನವಲನ ಹಕ್ಕಿಗೆ ಸಂಬಂಧಿಸಿದಂತೆ ಅದನ್ನು ನಿರಾಕರಿಸುವುದು ಅಥವಾ ಮುಂದುವರಿಸದೆ ಇರುವುದು ಅಥವಾ ಅನುಚಿತವಾಗಿ ನಡೆಸಿಕೊಳ್ಳುವುದು;

(ಜಿ) ವಾಸಿಸುವ, ಖರೀದಿಸುವ, ಬಾಡಿಗೆ ಪಡೆಯುವ ಅಥವಾ ಅನ್ಯಥಾ ಯಾವುದೇ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕಿಗೆ ಸಂಬಂಧಿಸಿದಂತೆ ಅವುಗಳನ್ನು ನಿರಾಕರಿಸುವುದು ಅಥವಾ ಮುಂದುವರಿಸದೆ ಇರುವುದು ಅಥವಾ ಅನುಚಿತವಾಗಿ ನಡೆಸಿಕೊಳ್ಳುವುದು;

(ಎಚ್) ಸಾರ್ವಜನಿಕ ಅಥವಾ ಖಾಸಗಿ ಪದಕ್ಕಾಗಿ ನಿಲ್ಲುವ ಅಥವಾ ಅದನ್ನು ಧಾರಣ ಮಾಡುವ ಅವಕಾಶವನ್ನು ನಿರಾಕರಿಸುವುದು ಅಥವಾ ಮುಂದುವರಿಸದೆ ಇರುವುದು ಅಥವಾ ಅನುಚಿತವಾಗಿ ನಡೆಸಿಕೊಳ್ಳುವುದು; ಮತ್ತು

(ಐ) ತೃತೀಯಲಿಂಗಿ ವ್ಯಕ್ತಿಯ ಪಾಲನೆ ಅಥವಾ ಅಭಿರಕ್ಷೆಯನ್ನು ಹೊಂದಿರಬಹುದಾದ ಸರ್ಕಾರಿ ಅಥವಾ ಖಾಸಗಿ ಕಾರ್ಯಸಂಸ್ಥೆಗೆ ಪ್ರವೇಶಾವಕಾಶವನ್ನು ನಿರಾಕರಿಸುವುದು, ಅದರಿಂದ ಹೊರಹಾಕುವುದು ಅಥವಾ ಅದರಲ್ಲಿ ಅನುಚಿತವಾಗಿ ನಡೆಸಿಕೊಳ್ಳುವುದು.

## ಅಧ್ಯಾಯ III

## ತೃತೀಯಲಿಂಗಿ ವ್ಯಕ್ತಿಗಳ ಗುರುತಿನ ಮಾನ್ಯತೆ

**4. ತೃತೀಯಲಿಂಗಿ ವ್ಯಕ್ತಿಯ ಗುರುತಿನ ಮಾನ್ಯತೆ.–** (1) ತೃತೀಯಲಿಂಗಿ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ತೃತೀಯಲಿಂಗಿ ವ್ಯಕ್ತಿಯಾಗಿ ಮಾನ್ಯತೆ ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ತೃತೀಯಲಿಂಗಿ ವ್ಯಕ್ತಿಯಾಗಿ ಮಾನ್ಯತೆ ಪಡೆದ ವ್ಯಕ್ತಿಯು ಸ್ವಯಂ–ಗ್ರಹಿತ ಲಿಂಗದ ಗುರುತಿನ ಹಕ್ಕನ್ನು ಹೊಂದಿರತಕ್ಕದ್ದು.

**5. ಗುರುತಿನ ಪ್ರಮಾಣಪತ್ರಕ್ಕಾಗಿ ಅರ್ಜಿ.–** ತೃತೀಯಲಿಂಗಿ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ಅಂಥ ದಸ್ತಾವೇಜುಗಳೊಂದಿಗೆ ತೃತೀಯಲಿಂಗಿ ವ್ಯಕ್ತಿಯಾಗಿ ಗುರುತಿನ ಪ್ರಮಾಣಪತ್ರವನ್ನು ಪಡೆಯುವುದಕ್ಕಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅರ್ಜಿಯನ್ನು ಸಲ್ಲಿಸಬಹುದು:

ಪರಂತು, ಅಪ್ರಾಪ್ತ ವಯಸ್ಸಿನ ಮಗುವಿನ ಸಂದರ್ಭದಲ್ಲಿ, ಅಂಥ ಮಗುವಿನ ತಂದೆ–ತಾಯಿ ಅಥವಾ ಪೋಷಕರು ಅಂಥ ಅರ್ಜಿಯನ್ನು ಸಲ್ಲಿಸತಕ್ಕದ್ದು.

**6. ಗುರುತಿನ ಪ್ರಮಾಣಪತ್ರ ನೀಡಿಕೆ.–** (1) ಜಿಲ್ಲಾ ಮ್ಯಾಜಿಸ್ಟ್ರೇಟನು 5ನೇ ಪ್ರಕರಣದ ಮೇರೆಗೆ ಅರ್ಜಿ ಸಲ್ಲಿಸಿದ ವ್ಯಕ್ತಿಗೆ, ನಿಯಮಿಸಬಹುದಾದ ಅಂಥ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ ಮತ್ತು ಅಂಥ ನಮೂನೆ ಮತ್ತು ರೀತಿಯಲ್ಲಿ, ಅಂಥ ಕಾಲದೊಳಗೆ, ತೃತೀಯಲಿಂಗಿ ವ್ಯಕ್ತಿಯ ಲಿಂಗವನ್ನು ಸೂಚಿಸಿ ತೃತೀಯಲಿಂಗಿ ವ್ಯಕ್ತಿಯೆಂಬ ಬಗ್ಗೆ ಗುರುತಿನ ಪ್ರಮಾಣಪತ್ರವನ್ನು ನೀಡತಕ್ಕದ್ದು.

(2) ತೃತೀಯಲಿಂಗಿ ವ್ಯಕ್ತಿಯ ಲಿಂಗವನ್ನು (1)ನೇ ಉಪಪ್ರಕರಣದ ಮೇರೆಗೆ ನೀಡಿದ ಪ್ರಮಾಣಪತ್ರಕ್ಕೆ ಅನುಸಾರವಾಗಿ ಎಲ್ಲಾ ಅಧಿಕೃತ ದಸ್ತಾವೇಜುಗಳಲ್ಲಿ ದಾಖಲು ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ವ್ಯಕ್ತಿಗೆ ನೀಡಿದ ಪ್ರಮಾಣಪತ್ರವು, ತೃತೀಯಲಿಂಗಿ ವ್ಯಕ್ತಿಗೆ ಇರುವ ಹಕ್ಕುಗಳನ್ನು ಪ್ರದಾನ ಮಾಡತಕ್ಕದ್ದು ಮತ್ತು ಅದು ಆತನ ಗುರುತಿನ ಮಾನ್ಯತೆಯ ರುಜುವಾತಾಗಿರತಕ್ಕದ್ದು.

**7. ಲಿಂಗ ಪರಿವರ್ತನೆ.–** (1) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ನೀಡಿದ ನಂತರ, ತೃತೀಯಲಿಂಗಿ ವ್ಯಕ್ತಿಯು ಗಂಡಾಗಿಯಾಗಲೀ ಅಥವಾ ಹೆಣ್ಣಾಗಿಯಾಗಲೀ ಲಿಂಗ ಪರಿವರ್ತನೆಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೆ, ಅಂಥ ವ್ಯಕ್ತಿಯು, ಯಾವ ವೈದ್ಯಕೀಯ ಸಂಸ್ಥೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದನೋ ಆ ವೈದ್ಯಕೀಯ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಅಥವಾ ಮುಖ್ಯ ವೈದ್ಯಾಧಿಕಾರಿಯು ಹಾಗೆಂದು ನೀಡಿದ ಪ್ರಮಾಣಪತ್ರದೊಂದಿಗೆ ಪರಿಷ್ಕೃತ ಪ್ರಮಾಣಪತ್ರಕ್ಕಾಗಿ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(2) ವೈದ್ಯಕೀಯ ಅಧೀಕ್ಷಕ ಅಥವಾ ಮುಖ್ಯ ವೈದ್ಯಾಧಿಕಾರಿಯು ನೀಡಿದ ಪ್ರಮಾಣಪತ್ರದೊಂದಿಗೆ ಲಗತ್ತಾದ ಅರ್ಜಿಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟನು ಸ್ವೀಕರಿಸಿದ ಮೇಲೆ ಮತ್ತು ಅಂಥ ಪ್ರಮಾಣಪತ್ರದ ಸರಿತನಗಳನ್ನು ಮನದಟ್ಟುಮಾಡಿಕೊಂಡ ಮೇಲೆ, ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಲಿಂಗ ಪರಿವರ್ತನೆಯನ್ನು ಸೂಚಿಸಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

(3) 6ನೇ ಪ್ರಕರಣದ ಮೇರೆಗೆ ಗುರುತಿನ ಪ್ರಮಾಣಪತ್ರವನ್ನು ಅಥವಾ (2)ನೇ ಉಪಪ್ರಕರಣದ ಮೇರೆಗೆ ಪರಿಷ್ಕೃತ ಪ್ರಮಾಣಪತ್ರವನ್ನು ಯಾರಿಗೆ ನೀಡಲಾಗಿದೆಯೋ ಆ ವ್ಯಕ್ತಿಯು, ತನ್ನ ಜನನ ಪ್ರಮಾಣಪತ್ರದಲ್ಲಿ ಮತ್ತು ಗುರುತಿಗೆ ಸಂಬಂಧಪಟ್ಟಿರುವ ಇತರ ಎಲ್ಲ ಅಧಿಕೃತ ದಸ್ತಾವೇಜುಗಳಲ್ಲಿ ತನ್ನ ಮೊದಲಿನ ಹೆಸರನ್ನು ಬದಲಾವಣೆ ಮಾಡಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಅಂಥ ಲಿಂಗ ಪರಿವರ್ತನೆ ಮತ್ತು (2)ನೇ ಉಪಪ್ರಕರಣದ ಮೇರೆಗೆ ಪರಿಷ್ಕೃತ ಪ್ರಮಾಣಪತ್ರ ನೀಡಿಕೆಯು, ಈ ಅಧಿನಿಯಮದ ಮೇರೆಗೆ ಅಂಥ ವ್ಯಕ್ತಿಯ ಹಕ್ಕುಗಳು ಮತ್ತು ಅರ್ಹತೆಗಳಿಗೆ (entitlements) ಬಾಧಕವನ್ನುಂಟು ಮಾಡತಕ್ಕದ್ದಲ್ಲ.

## ಅಧ್ಯಾಯ IV

## ಸರ್ಕಾರದ ಕ್ಷೇಮಾಭಿವೃದ್ಧಿ ಕ್ರಮಗಳು

**8. ಸಮುಚಿತ ಸರ್ಕಾರದ ಬಾಧ್ಯತೆ.–** (1) ಸಮುಚಿತ ಸರ್ಕಾರವು, ತೃತೀಯಲಿಂಗಿ ವ್ಯಕ್ತಿಗಳ ಪೂರ್ಣ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆಯನ್ನು ಮತ್ತು ಸಮಾಜದಲ್ಲಿ ಅವರ ಒಳಗೊಳ್ಳುವಿಕೆಯನ್ನು ಸುನಿಶ್ಚಿತಗೊಳಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಸಮುಚಿತ ಸರ್ಕಾರವು, ತೃತೀಯಲಿಂಗಿ ವ್ಯಕ್ತಿಗಳ ಹಕ್ಕುಗಳನ್ನು ಮತ್ತು ಹಿತಾಸಕ್ತಿಗಳನ್ನು ಸಂರಕ್ಷಿಸಲು ಮತ್ತು ಆ ಸರ್ಕಾರವು ರೂಪಿಸಿದ ಕ್ಷೇಮಾಭಿವೃದ್ಧಿ ಯೋಜನೆಗಳ ಪ್ರಯೋಜನಗಳನ್ನು ಪಡೆಯುವುದಕ್ಕೆ ಅನುಕೂಲ ಕಲ್ಪಿಸಲು ನಿಯಮಿಸಬಹುದಾದಂಥ ಕ್ಷೇಮಾಭಿವೃದ್ಧಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(3) ಸಮುಚಿತ ಸರ್ಕಾರವು, ತೃತೀಯಲಿಂಗಿ ಸಂವೇದಿಯಾದ, ಕಳಂಕ ರಹಿತವಾದ ಮತ್ತು ತಾರತಮ್ಯ ರಹಿತವಾದ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

(4) ಸಮುಚಿತ ಸರ್ಕಾರವು, ತೃತೀಯಲಿಂಗಿ ವ್ಯಕ್ತಿಗಳ ಅಗತ್ಯತೆಗಳನ್ನು ಪೂರೈಸಲು ಅಂಥ ವ್ಯಕ್ತಿಗಳ ರಕ್ಷಣೆ, ಸಂರಕ್ಷಣೆ ಮತ್ತು ಪುನರ್ವಸತಿಗಾಗಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(5) ಸಮುಚಿತ ಸರ್ಕಾರವು, ಸಾಂಸ್ಕೃತಿಕ ಮತ್ತು ಮನರಂಜನಾತ್ಮಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಕ್ಕೆ ತೃತೀಯಲಿಂಗಿ ವ್ಯಕ್ತಿಗಳ ಹಕ್ಕನ್ನು ಉತ್ತೇಜಿಸಲು ಮತ್ತು ಸಂರಕ್ಷಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ V

## ಕಾರ್ಯಸಂಸ್ಥೆಗಳ ಮತ್ತು ಇತರ ವ್ಯಕ್ತಿಗಳ ಬಾಧ್ಯತೆ

**9. ನಿಯೋಜನೆಯಲ್ಲಿ ತಾರತಮ್ಯ ಮಾಡದಿರುವುದು.–** ನೇಮಕಾತಿ, ಪದನ್ನೋತಿ ಮತ್ತು ಇತರ ಸಂಬಂಧಿತ ವಿಷಯಗಳನ್ನು ಒಳಗೊಂಡಂತೆ, ಅದಕ್ಕೆ ಸೀಮಿತಗೊಳಿಸದೆ, ನಿಯೋಜನೆಗೆ ಸಂಬಂಧಪಟ್ಟಿರುವ ಯಾವುದೇ ವಿಷಯದಲ್ಲಿ ಯಾರೇ ತೃತೀಯಲಿಂಗಿ ವ್ಯಕ್ತಿಯ ವಿರುದ್ಧ ಯಾವುದೇ ಕಾರ್ಯಸಂಸ್ಥೆಯು ತಾರತಮ್ಯ ಮಾಡತಕ್ಕದ್ದಲ್ಲ.

**10. ಕಾರ್ಯಸಂಸ್ಥೆಗಳ ಬಾಧ್ಯತೆಗಳು.–** ಪ್ರತಿಯೊಂದು ಕಾರ್ಯಸಂಸ್ಥೆಯು, ಈ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಪಡಿಸತಕ್ಕದ್ದು ಮತ್ತು ತೃತೀಯಲಿಂಗಿ ವ್ಯಕ್ತಿಗಳಿಗೆ ನಿಯಮಿಸಬಹುದಾದಂಥ ಸೌಲಭ್ಯಗಳನ್ನು ಒದಗಿಸತಕ್ಕದ್ದು.

**11. ಕುಂದುಕೊರತೆ ನಿವಾರಣಾ ಕಾರ್ಯವಿಧಾನ.–** ಪ್ರತಿಯೊಂದು ಕಾರ್ಯಸಂಸ್ಥೆಯು, ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ಸಂಬಂಧಪಟ್ಟ ದೂರುಗಳ ಬಗ್ಗೆ ವ್ಯವಹರಿಸಲು ಒಬ್ಬ ವ್ಯಕ್ತಿಯನ್ನು ದೂರು ಸ್ವೀಕಾರ ಅಧಿಕಾರಿಯಾಗಿ ಗೊತ್ತುಪಡಿಸತಕ್ಕದ್ದು.

**12. ವಾಸಿಸುವ ಹಕ್ಕು.–** (1) ಯಾವುದೇ ಮಗುವಿನ ಹಿತದೃಷ್ಟಿಯಿಂದ ಸಕ್ಷಮ ನ್ಯಾಯಾಲಯದ ಆದೇಶದ ಮೇಲೆ ಹೊರತು, ಆ ಮಗುವು ತೃತೀಯಲಿಂಗಿಯಾಗಿರುವ ಕಾರಣದ ಮೇಲೆ ತಂದೆ–ತಾಯಿಗಳಿಂದ ಅಥವಾ ನಿಕಟ ಕುಟುಂಬದಿಂದ ಆ ಮಗುವನ್ನು ಪ್ರತ್ಯೇಕವಾಗಿಸತಕ್ಕದ್ದಲ್ಲ.

(2) ಪ್ರತಿಯೊಬ್ಬ ತೃತೀಯಲಿಂಗಿ ವ್ಯಕ್ತಿಯು,–

(ಎ) ತಂದೆ–ತಾಯಿ ಅಥವಾ ನಿಕಟ ಕುಟುಂಬದ ಸದಸ್ಯರು ನೆಲೆಸಿರುವ ಮನೆಯಲ್ಲಿ ವಾಸಿಸುವ ಹಕ್ಕನ್ನು;

(ಬಿ) ಅಂಥ ಕುಟುಂಬದಿಂದ ಅಥವಾ ಅದರ ಯಾವುದೇ ಭಾಗದಿಂದ ಹೊರಗಿಡದಿರುವ ಹಕ್ಕನ್ನು; ಮತ್ತು

(ಸಿ) ತಾರತಮ್ಯವಿಲ್ಲದ ರೀತಿಯಲ್ಲಿ ಅಂಥ ಕುಟುಂಬದಲ್ಲಿನ ಸೌಲಭ್ಯಗಳನ್ನು ಅನುಭವಿಸುವ ಮತ್ತು ಉಪಯೋಗಿಸುವ ಹಕ್ಕನ್ನು

– ಹೊಂದಿರತಕ್ಕದ್ದು.

(3) ಯಾರೇ ತಂದೆ–ತಾಯಿ ಅಥವಾ ಆತನ ನಿಕಟ ಕುಟುಂಬದ ಸದಸ್ಯನು, ತೃತೀಯಲಿಂಗಿ ವ್ಯಕ್ತಿಯ ಪಾಲನೆ ಮಾಡಲು ಅಸಮರ್ಥನಾದರೆ, ಸಕ್ಷಮ ನ್ಯಾಯಾಲಯವು ಆದೇಶದ ಮೂಲಕ ಅಂಥ ವ್ಯಕ್ತಿಯನ್ನು ಪುನರ್ವಸತಿ ಕೇಂದ್ರದಲ್ಲಿ ಇರಿಸುವಂತೆ ನಿರ್ದೇಶಿಸತಕ್ಕದ್ದು.

## ಅಧ್ಯಾಯ VI

## ತೃತೀಯಲಿಂಗಿ ವ್ಯಕ್ತಿಗಳ ಶಿಕ್ಷಣ, ಸಾಮಾಜಿಕ ಭದ್ರತೆ ಮತ್ತು ಆರೋಗ್ಯ

**13. ತೃತೀಯಲಿಂಗಿ ವ್ಯಕ್ತಿಗಳಿಗೆ ಸಮ್ಮಿಳಿತ (inclusive) ಶಿಕ್ಷಣವನ್ನು ಒದಗಿಸಲು ಶಿಕ್ಷಣ ಸಂಸ್ಥೆಗಳ ಬಾಧ್ಯತೆ.–** ಸಮುಚಿತ ಸರ್ಕಾರದಿಂದ ಧನಸಹಾಯ ಅಥವಾ ಮಾನ್ಯತೆ ಪಡೆದ ಪ್ರತಿಯೊಂದು ಶಿಕ್ಷಣ ಸಂಸ್ಥೆಯು, ಇತರರಿಗೆ ಸಮಾನವಾದ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ ತೃತೀಯಲಿಂಗಿ ವ್ಯಕ್ತಿಗಳಿಗೆ ಸಮ್ಮಿಳಿತ ಶಿಕ್ಷಣವನ್ನು ಒದಗಿಸತಕ್ಕದ್ದು ಮತ್ತು ಕ್ರೀಡೆಗಳು, ಮನರಂಜನೆ ಮತ್ತು ವಿರಾಮದ ಚಟುವಟಿಕೆಗಳಿಗೆ ಅವಕಾಶಗಳನ್ನು ನೀಡತಕ್ಕದ್ದು.

**14. ವೃತ್ತಿ ತರಬೇತಿ ಮತ್ತು ಸ್ವ–ಉದ್ಯೋಗ.–** ಸಮುಚಿತ ಸರ್ಕಾರವು, ವೃತ್ತಿ ತರಬೇತಿ ಮತ್ತು ಸ್ವ–ಉದ್ಯೋಗವೂ ಒಳಗೊಂಡಂತೆ, ತೃತೀಯಲಿಂಗಿ ವ್ಯಕ್ತಿಗಳ ಜೀವನೋಪಾಯವನ್ನು ಸುಲಭಗೊಳಿಸುವ ಮತ್ತು ಬೆಂಬಲಿಸುವ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

**15. ಆರೋಗ್ಯಪಾಲನಾ ಸೌಲಭ್ಯಗಳು.–** ಸಮುಚಿತ ಸರ್ಕಾರವು, ತೃತೀಯಲಿಂಗಿ ವ್ಯಕ್ತಿಗಳ ಸಂಬಂಧದಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಎಂದರೆ:–

(ಎ) ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯು, ಈ ಬಗ್ಗೆ ಹೊರಡಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಅಂಥ ವ್ಯಕ್ತಿಗಳಿಗಾಗಿ ಸೆರೋ–ಕಣ್ಗಾವಲು ಇಡುವುದಕ್ಕೆ ಪ್ರತ್ಯೇಕ ಹ್ಯೂಮನ್ ಇಮ್ಯುನೋಡಿಫಿಷಿಯನ್ಸಿ ವೈರಸ್ ಸೆರೋ–ಕಣ್ಗಾವಲು ಕೇಂದ್ರಗಳನ್ನು ಸ್ಥಾಪಿಸುವುದು;

(ಬಿ) ಲಿಂಗ ಪುನರ್–ನಿರ್ಧರಣಾ ಶಸ್ತ್ರಚಿಕಿತ್ಸೆ (sex reassignment surgery) ಮತ್ತು ಹಾರ್ಮೋನ್ ಥೆರಪಿಯೂ ಒಳಗೊಂಡಂತೆ ವೈದ್ಯಕೀಯ ಪಾಲನಾ ಸೌಲಭ್ಯಗಳನ್ನು ಒದಗಿಸುವುದು;

(ಸಿ) ಲಿಂಗ ಪುನರ್‌–ನಿರ್ಧರಣಾ ಶಸ್ತ್ರಚಿಕಿತ್ಸೆ ಮತ್ತು ಹಾರ್ಮೋನ್ ಥೆರಪಿ ಮಾಡುವ ಮುಂಚೆ ಮತ್ತು ನಂತರ ಸಮಾಲೋಚಿಸುವುದು;

(ಡಿ) ತೃತೀಯಲಿಂಗಿ ವ್ಯಕ್ತಿಗಳ ಆರೋಗ್ಯಕ್ಕೆ ಸಂಬಂಧಿಸಿದ ವಿಶ್ವ ವೃತ್ತಿ ಸಂಘದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಲಿಂಗ ಪುನರ್‌–ನಿರ್ಧರಣಾ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಆರೋಗ್ಯ ಕೈಪಿಡಿಯನ್ನು ಹೊರತರುವುದು;

(ಇ) ತೃತೀಯಲಿಂಗಿ ವ್ಯಕ್ತಿಗಳ ಆರೋಗ್ಯದ ಸಮಸ್ಯೆಗಳನ್ನು ಪರಿಹರಿಸಲು ವೈದ್ಯರಿಗಾಗಿ ವೈದ್ಯಕೀಯ ಪಠ್ಯಕ್ರಮ ಮತ್ತು ಸಂಶೋಧನೆಯನ್ನು ಪುನರವಲೋಕಿಸತಕ್ಕದ್ದು;

(ಎಫ್) ತೃತೀಯಲಿಂಗಿ ವ್ಯಕ್ತಿಗಳಿಗೆ ಆಸ್ಪತ್ರೆಗಳಲ್ಲಿ ಮತ್ತು ಇತರ ಆರೋಗ್ಯ ಪಾಲನಾ ಸಂಸ್ಥೆಗಳಲ್ಲಿ ಮತ್ತು ಕೇಂದ್ರಗಳಲ್ಲಿ ಸೌಲಭ್ಯವನ್ನು ಪಡೆಯುವ ಅವಕಾಶ ಕಲ್ಪಿಸುವುದು;

(ಜಿ) ತೃತೀಯಲಿಂಗಿ ವ್ಯಕ್ತಿಗಳ ಲಿಂಗ ಪುನರ್‌–ನಿರ್ಧರಣಾ ಶಸ್ತ್ರಚಿಕಿತ್ಸೆ, ಹಾರ್ಮೋನ್ ಥೆರಪಿ, ಲೇಸರ್ ಥೆರಪಿ ಅಥವಾ ಇತರ ಯಾವುದೇ ಆರೋಗ್ಯ ಸಮಸ್ಯೆಗಳಿಗಾಗಿ ಸಮಗ್ರ ವಿಮಾ ಯೋಜನೆಯ ಮೂಲಕ ವೈದ್ಯಕೀಯ ವೆಚ್ಚಗಳಿಗೆ ವಿಮಾರಕ್ಷಣೆಯ ಅವಕಾಶ ಕಲ್ಪಿಸುವುದು.

## ಅಧ್ಯಾಯ VII

## ರಾಷ್ಟ್ರೀಯ ತೃತೀಯಲಿಂಗಿ ವ್ಯಕ್ತಿಗಳ ಪರಿಷತ್ತು

**16. ರಾಷ್ಟ್ರೀಯ ತೃತೀಯಲಿಂಗಿ ವ್ಯಕ್ತಿಗಳ ಪರಿಷತ್ತು.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ, ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ಗೊತ್ತುಪಡಿಸಿದ ಪ್ರಕಾರ್ಯಗಳನ್ನು ನೆರವೇರಿಸಲು ರಾಷ್ಟ್ರೀಯ ತೃತೀಯಲಿಂಗಿ ವ್ಯಕ್ತಿಗಳ ಪರಿಷತ್ತನ್ನು ರಚಿಸತಕ್ಕದ್ದು.

(2) ರಾಷ್ಟ್ರೀಯ ಪರಿಷತ್ತು, ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಪ್ರಭಾರದಲ್ಲಿರುವ ಕೇಂದ್ರ ಸಚಿವರು – ಅಧ್ಯಕ್ಷರು, ಪದನಿಮಿತ್ತ;

(ಬಿ) ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಪ್ರಭಾರದಲ್ಲಿರುವ ರಾಜ್ಯ ಸಚಿವರು – ಉಪಾಧ್ಯಕ್ಷರು, ಪದನಿಮಿತ್ತ;

(ಸಿ) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ – ಸದಸ್ಯರು, ಪದನಿಮಿತ್ತ;

(ಡಿ) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಿರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗೃಹ ವ್ಯವಹಾರಗಳು, ವಸತಿ ಮತ್ತು ನಗರ ವ್ಯವಹಾರಗಳು, ಅಲ್ಪಸಂಖ್ಯಾತ ವ್ಯವಹಾರಗಳು, ಮಾನವ ಸಂಪನ್ಮೂಲ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದಿಂದ ಮತ್ತು ಕಾನೂನು ವ್ಯವಹಾರಗಳು, ಪಿಂಚಣಿ ಮತ್ತು ಪಿಂಚಣಿದಾರರ ಕ್ಷೇಮಾಭಿವೃದ್ಧಿ ಇಲಾಖೆಗಳಿಂದ ಮತ್ತು ರಾಷ್ಟ್ರೀಯ ಭಾರತ ಪರಿವರ್ತನಾ ಸಂಸ್ಥೆ (NITI) ಆಯೋಗದ ತಲಾ ಒಬ್ಬ ಪ್ರತಿನಿಧಿ – ಸದಸ್ಯರು, ಪದನಿಮಿತ್ತ;

(ಇ) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಿರದ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ರಾಷ್ಟ್ರೀಯ ಮಹಿಳಾ ಆಯೋಗದಿಂದ ತಲಾ ಒಬ್ಬ ಪ್ರತಿನಿಧಿ – ಸದಸ್ಯರು, ಪದನಿಮಿತ್ತ;

(ಎಫ್) ಸರದಿಯ ಮೂಲಕ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು, ಕೇಂದ್ರ ಸರ್ಕಾರದಿಂದ ನಾಮನಿರ್ದೇಶನಗೊಂಡ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಈಶಾನ್ಯ ವಲಯಗಳಿಂದ ತಲಾ ಒಬ್ಬ ಪ್ರತಿನಿಧಿ – ಸದಸ್ಯರು, ಪದನಿಮಿತ್ತ;

(ಜಿ) ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಸರದಿಯ ಮೂಲಕ ತೃತೀಯಲಿಂಗಿ ಸಮುದಾಯದ ಐವರು ಪ್ರತಿನಿಧಿಗಳು, ಕೇಂದ್ರ ಸರ್ಕಾರದಿಂದ ನಾಮನಿರ್ದೇಶನಗೊಂಡ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಈಶಾನ್ಯ ವಲಯಗಳಿಂದ ತಲಾ ಒಬ್ಬ ಪ್ರತಿನಿಧಿ – ಸದಸ್ಯರು;

(ಎಚ್) ಕೇಂದ್ರ ಸರ್ಕಾರದಿಂದ ನಾಮನಿರ್ದೇಶನಗೊಂಡ ತೃತೀಯಲಿಂಗಿ ವ್ಯಕ್ತಿಗಳ ಕ್ಷೇಮಾಭಿವೃದ್ಧಿಗಾಗಿ ಕಾರ್ಯನಿರ್ವಹಿಸುವ ಸರ್ಕಾರೇತರ ಸಂಘ ಅಥವಾ ಸಂಸ್ಥೆಗಳನ್ನು ಪ್ರತಿನಿಧಿಸುವ ಐವರು ತಜ್ಞರು, ಸದಸ್ಯರು; ಮತ್ತು

(ಐ) ತೃತೀಯಲಿಂಗಿ ವ್ಯಕ್ತಿಗಳ ಕ್ಷೇಮಾಭಿವೃದ್ಧಿಯ ಬಗ್ಗೆ ವ್ಯವಹರಿಸುವ ಭಾರತ ಸರ್ಕಾರದ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಜಂಟಿ ಕಾರ್ಯದರ್ಶಿ – ಸದಸ್ಯ ಕಾರ್ಯದರ್ಶಿ, ಪದನಿಮಿತ್ತ.

(3) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ, ರಾಷ್ಟ್ರೀಯ ಪರಿಷತ್ತಿನ ಸದಸ್ಯನು ತಾನು ನಾಮನಿರ್ದೇಶಿತನಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

**17. ಪರಿಷತ್ತಿನ ಪ್ರಕಾರ್ಯಗಳು.–** ರಾಷ್ಟ್ರೀಯ ಪರಿಷತ್ತು, ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(ಎ) ತೃತೀಯಲಿಂಗಿ ವ್ಯಕ್ತಿಗಳಿಗೆ ಸಂಬಂಧಿಸಿದ ಕಾರ್ಯನೀತಿಗಳು, ಕಾರ್ಯಕ್ರಮಗಳು, ಶಾಸನ ರಚನೆ ಮತ್ತು ಪರಿಯೋಜನೆಗಳನ್ನು ರೂಪಿಸುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು;

(ಬಿ) ತೃತೀಯಲಿಂಗಿ ವ್ಯಕ್ತಿಗಳ ಸಮಾನತೆಯನ್ನು ಸಾಧಿಸುವುದಕ್ಕಾಗಿ ಮತ್ತು ಪೂರ್ಣ ಭಾಗವಹಿಸುವಿಕೆಗಾಗಿ ವಿನ್ಯಾಸಗೊಳಿಸಿದ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳ ಪರಿಣಾಮವನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಅದರ ಮೌಲ್ಯಮಾಪನ ಮಾಡುವುದು;

(ಸಿ) ತೃತೀಯಲಿಂಗಿ ವ್ಯಕ್ತಿಗಳಿಗೆ ಸಂಬಂಧಪಟ್ಟಿರುವ ವಿಷಯಗಳ ಬಗ್ಗೆ ವ್ಯವಹರಿಸುತ್ತಿರುವ ಸರ್ಕಾರದ ಎಲ್ಲ ಇಲಾಖೆಗಳ ಮತ್ತು ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಘಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಪುನರವಲೋಕಿಸುವುದು ಮತ್ತು ಸಮನ್ವಯಗೊಳಿಸುವುದು;

(ಡಿ) ತೃತೀಯಲಿಂಗಿ ವ್ಯಕ್ತಿಗಳ ಕುಂದುಕೊರತೆಗಳನ್ನು ನಿವಾರಿಸುವುದು; ಮತ್ತು

(ಇ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

## ಅಧ್ಯಾಯ VIII

## ಅಪರಾಧಗಳು ಮತ್ತು ದಂಡನೆಗಳು

**18. ಅಪರಾಧಗಳು ಮತ್ತು ದಂಡನೆಗಳು.–** ಯಾರೇ ವ್ಯಕ್ತಿಯು,–

(ಎ) ಸರ್ಕಾರವು ಸಾರ್ವಜನಿಕ ಉದ್ದೇಶಗಳಿಗಾಗಿ ವಿಧಿಸಿದ ಯಾವುದೇ ಕಡ್ಡಾಯ ಸೇವೆಯನ್ನು ಹೊರತುಪಡಿಸಿ, ಬಲವಂತದ ಅಥವಾ ಜೀತಗಾರಿಕೆ ಕೆಲಸದಲ್ಲಿ ತೊಡಗುವಂತೆ ತೃತೀಯಲಿಂಗಿ ವ್ಯಕ್ತಿಯನ್ನು ಒತ್ತಾಯಪಡಿಸಿದರೆ ಅಥವಾ ಪುಸಲಾಯಿಸಿದರೆ;

(ಬಿ) ತೃತೀಯಲಿಂಗಿ ವ್ಯಕ್ತಿಗೆ ಸಾರ್ವಜನಿಕ ಸ್ಥಳದಲ್ಲಿನ ದಾರಿಯ ಹಕ್ಕನ್ನು ನಿರಾಕರಿಸಿದರೆ ಅಥವಾ ಇತರ ಸದಸ್ಯರಿಗೆ ಪ್ರವೇಶವಿರುವ ಅಥವಾ ಅವರು ಬಳಸುವ ಹಕ್ಕನ್ನು ಹೊಂದಿರುವ ಸಾರ್ವಜನಿಕ ಸ್ಥಳವನ್ನು ಬಳಸುವುದಕ್ಕೆ ಅಥವಾ ಪ್ರವೇಶ ಮಾಡುವುದಕ್ಕೆ ಅಂಥ ವ್ಯಕ್ತಿಗೆ ಅಡ್ಡಿಯುಂಟು ಮಾಡಿದರೆ;

(ಸಿ) ತೃತೀಯಲಿಂಗಿ ವ್ಯಕ್ತಿಗೆ ಕುಟುಂಬವನ್ನು, ಗ್ರಾಮವನ್ನು ಅಥವಾ ಇತರ ವಾಸಿಸುವ ಸ್ಥಳವನ್ನು ತೊರೆಯುವುದಕ್ಕೆ ಬಲವಂತಪಡಿಸಿದರೆ ಅಥವಾ ತೊರೆಯುವುದಕ್ಕೆ ಕಾರಣವಾದರೆ; ಮತ್ತು

(ಡಿ) ತೃತೀಯಲಿಂಗಿ ವ್ಯಕ್ತಿಯ ಜೀವನ, ಸುರಕ್ಷತೆ, ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಮಾನಸಿಕವಾಗಿ ಅಥವಾ ದೈಹಿಕವಾಗಿ ಹಾನಿಯುಂಟು ಮಾಡಿದರೆ ಅಥವಾ ಕ್ಷತಿಯುಂಟು ಮಾಡಿದರೆ ಅಥವಾ ಅಪಾಯವನ್ನುಂಟು ಮಾಡಿದರೆ ಅಥವಾ ದೈಹಿಕ ದುರುಪಯೋಗ, ಲೈಂಗಿಕ ದುರುಪಯೋಗ, ಮೌಖಿಕ ಮತ್ತು ಭಾವನಾತ್ಮಕ ದುರುಪಯೋಗ ಮತ್ತು ಆರ್ಥಿಕ ದುರುಪಯೋಗವಾಗುವಂಥ ಯಾವುದೇ ಕೃತ್ಯಗಳನ್ನು ಮಾಡಿದರೆ

– ಅವನು ಆರು ತಿಂಗಳುಗಳಿಗೆ ಕಡಿಮೆಯಿರದ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

## ಅಧ್ಯಾಯ IX

### ಸಂಕೀರ್ಣ

**19. ಕೇಂದ್ರ ಸರ್ಕಾರದಿಂದ ಅನುದಾನಗಳು.–** ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಸಂಸತ್ತು ಕಾನೂನು ಮೂಲಕ ಈ ಬಗ್ಗೆ ಯುಕ್ತ ಧನವಿನಿಯೋಗ ಮಾಡಿದ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅಗತ್ಯವಾಗಬಹುದಾದಂಥ ಮೊತ್ತವನ್ನು ರಾಷ್ಟ್ರೀಯ ಪರಿಷತ್ತಿಗೆ ಸಂದಾಯ ಮಾಡತಕ್ಕದ್ದು.

**20. ಅಧಿನಿಯಮವು ಇತರ ಯಾವುದೇ ಕಾನೂನನ್ನು ಅಲ್ಪೀಕರಿಸದಿರುವುದು.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿಗೆ ಹೆಚ್ಚಿನದಾಗಿರತಕ್ಕದ್ದು ಆದರೆ ಅಲ್ಪೀಕರಿಸತಕ್ಕದ್ದಲ್ಲ.

**21. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ, ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**22. ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.–** (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳನ್ನು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 5ನೇ ಪ್ರಕರಣದ ಮೇರೆಗೆ ಸಲ್ಲಿಸತಕ್ಕ ಅರ್ಜಿಯ ನಮೂನೆ ಮತ್ತು ರೀತಿ;

(ಬಿ) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೀಡಬೇಕಾದ ಗುರುತಿನ ಪ್ರಮಾಣಪತ್ರದ ಕಾರ್ಯವಿಧಾನ, ನಮೂನೆ, ರೀತಿ ಮತ್ತು ಅವಧಿ;

(ಸಿ) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸತಕ್ಕ ಅರ್ಜಿಯ ನಮೂನೆ ಮತ್ತು ರೀತಿ;

(ಡಿ) 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪರಿಷ್ಕೃತ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಇರುವ ನಮೂನೆ, ಅವಧಿ ಮತ್ತು ರೀತಿ;

(ಇ) 8ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕಲ್ಪಿಸಬೇಕಾದ ಕ್ಷೇಮಾಭಿವೃದ್ಧಿ ಕ್ರಮಗಳು;

(ಎಫ್) 10ನೇ ಪ್ರಕರಣದ ಮೇರೆಗೆ ಒದಗಿಸಬೇಕಾದ ಸೌಲಭ್ಯಗಳು;

(ಜಿ) 17ನೇ ಪ್ರಕರಣದ (ಇ) ಖಂಡದ ಮೇರೆಗೆ, ರಾಷ್ಟ್ರೀಯ ಪರಿಷತ್ತಿನ ಇತರ ಪ್ರಕಾರ್ಯಗಳು; ಮತ್ತು

(ಎಚ್) ಅಗತ್ಯಪಡಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಉಪಪ್ರಕರಣ (1)ರ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡೂ ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ಉಪಪ್ರಕರಣ (1)ರ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡೂ ಸದನಗಳನ್ನು ಒಳಗೊಂಡಿರುವಲ್ಲಿ, ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನಮಂಡಲವು ಒಂದೇ ಸದನವನ್ನು ಒಳಗೊಂಡಿರುವಲ್ಲಿ ಆ ಸದನದ ಮುಂದೆ ಮಂಡಿಸತಕ್ಕದ್ದು.

**23. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ, ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಎರಡು ಸದನಗಳ ಮುಂದೆ ಇಡತಕ್ಕದ್ದು.

**********